ಡೈರೆಕ್ಟರ್ ಬ್ಯಾಗಿನಿಂದ ಒಂದು ಫೈಲು ಮತ್ತು ಹತ್ತು ಸಾವಿರ ರೂಪಾಯಿಗಳ ನೋಟಿನ ಕಂತೆ ಹೊರಗೆಳೆದರು. ಅವನು ನಾರಾಯಣಿಯ ಮುಂದೆ ಒಂದು ಕಾಗದ ಹಿಡಿದು ಸಹಿ ಮಾಡಲು ಹೇಳಿದಾಗ ಅವಳು ಹಿಂದುಮುಂದು ಆಲೋಚಿಸದೆ ರುಜು ಮಾಡಿದಳು. ಮುಖ್ಯವಾಗಿ ಈ ಗದ್ದಲದಲ್ಲಿ ಅವಳ ತಲೆಕೆಟ್ಟಂತಾಗಿತ್ತು. ಕಾಗದ ಎದುರಿಗಿದ್ದರೂ ಆಕೆಗೆ ಓದಲು ಬರುತ್ತದೆಯೆಂದು ಖಾತ್ರಿಯಿರಲಿಲ್ಲ. ಒಂಬತ್ತನೆಯ ಇಯತ್ತೆಯವರೆಗೆ ಎಂದೋ ಓದ್ದಿದ್ದು ಮರೆತು ಹೋಗಿತ್ತು. ನಲವತ್ತು ಸಾವಿರ ರೂಪಾಯಿ, ಸಿನಿಮಾದಲ್ಲಿ ಕೆಲಸ ಎಂದು ಕೇಳಿಯೆ ಅವಳ ತಲೆ ಮೊಸರುಗಡಿಗೆಯಾಗಿತ್ತು.

ಅನಂತರ ಅವರು ಸಹಿ ಮಾಡಲು ಬರುವಂಥ ಇಬ್ಬರು ಹೆಣ್ಣುಮಕ್ಕಳ ಸಹಿ ತೆಗೆದುಕೊಂಡರು. ಒಬ್ಬಳು ಸಹಿ ಮಾಡುವಾಗ ಪಿಕ್ಚರಿನ ಹೆಸರೇನು ಅಂತ ಕೇಳಿದಳು.

'ಹೆಸರು 'ನಾರಿ ಮತ್ತು ದುರ್ಗಾ.'

ಸ್ವಲ್ಪ ಹೊತ್ತು ಆ ವೇಶ್ಯೆಯರು ಆ ಹೆಸರು ಮೆಲುಕು ಹಾಕಿದರು. ಅವರಿಗೆ ಅದೊಂದು ವಿಚಿತ್ರ ರೀತಿಯ ಹೆಸರು ಅನಿಸಿತು.

ಅವರು ಹತ್ತು ಸಾವಿರ ರೂಪಾಯಿಗಳ ನೋಟಿನ ಕಂತೆ ಕೊಟ್ಟು ಹೊರಟು ಹೋದರು. ಹೋಗುವಾಗ ಅವರು 'ಶೂಟಿಂಗ್ ಶುರುವಾಗುವ ಮುಂಚಿನ ದಿನ ತಿಳಿಸುತ್ತೇವೆ. ನಿನ್ನನ್ನು ಕರ್‌ಕೊಂಡು ಹೋಗಲು ಕಾರ್ ಕಳಿಸ್ತೀವಿ. ನೀನು ಸಹಿ ಮಾಡಿದ್ದು ಕಾನೂನುಬದ್ಧ ಕಾಗದಪತ್ರಗಳು ಎಂದು ನೆನಪಿರಲಿ. ಕರಾರು ಮುರಿದರೆ ಕೋರ್ಟು ಕಚೇರಿಯೂ ಆಗಬಹುದು' ಎಂದು ಎಚ್ಚರಿಸಿದರು.

ನಾರಾಯಣಿಗೆ ತಾನೇನು ಮಾಡಿದೆಯೆನ್ನುವುದೇ ತಿಳಿಯಲಿಲ್ಲ. ಆಗ ಅವಳಿಗೆ ತನ್ನನ್ನು ಯಾರಾದರೂ ಮೋಸ ಮಾಡಿ ಕಟ್ಟಿಕೊಂಡು ಹೋಗಬಹುದು. ಒಮ್ಮೊಮ್ಮೆ ಅನಿಸುತ್ತಿತ್ತು ಗಿರಾಕಿಗಳಿಂದ ನಿತ್ಯ ಅಡಚಿ ಪರಚಿಕೊಳ್ಳುವುದಕ್ಕಿಂತ ಜಗತ್ತಿನಲ್ಲಿ ಬೇರೇನೂ ಕೆಟ್ಟದಿರಲಾರದು. ಇದಕ್ಕಿಂತ ಕೆಟ್ಟದ್ದು ಇನ್ನೇನು ಇರಲು ಸಾಧ್ಯ? ಹೀಗೆಲ್ಲ ಯೋಚಿಸಿದಾಗ ಅವಳಲ್ಲಿ ಮಾನ ಮರ್ಯಾದೆಯ ಸೀಮೆ, ಸಮಾಜದ ಅಂಜಿಕೆ, ಗಂಡಸರ ಪರಿವೆ ಒಂದೂ ಉಳಿಯಲಿಲ್ಲ. ಒಂದು ಬಗೆಯ ವಿಮೋಚನಗೊಂಡ ಬದುಕು. ಎಲ್ಲವನ್ನೂ ಬಿಟ್ಟು ಹಾಕಿದಮೇಲೆ ಹೆಣ್ಣುಮಕ್ಕಳಲ್ಲಿ ಅಂಜಿಕೆಯೆನ್ನುವುದೆಲ್ಲಿ ಇರುತ್ತದೆ?

ವಠಾರದಲ್ಲಿ ನಾರಾಯಣಿ ಸಿನಿಮಾದಲ್ಲಿ ನಾಯಕಿಯಾಗಿ ಕೆಲಸ ಮಾಡಲಿದ್ದಾಳೆಂಬ ಸುದ್ದಿ ಹರಡಲು ತಡವಾಗಲಿಲ್ಲ. ಸಿನಿಮಾದ ಹೆಸರೂ ಜನರ ಬಾಯಿಯಲ್ಲಿ ಕುಣಿಯುತ್ತಿತ್ತು. ವಠಾರದಾಚೆಗಿನ ಜನರೆಲ್ಲ ಬಂದು ಅವಳನ್ನು ಅಭಿನಂದಿಸಿ ಹೋಗುತ್ತಿದ್ದರು. ಬರುಹೋಗುವವರ ಗದ್ದಲ ಹೆಚ್ಚಾಯಿತು.

ಗುಂಪು ಗುಂಪಾಗಿ ಜನ ಸೇರತೊಡಗಿದರು. ಸಂಜೆಯ ಹೊತ್ತು ವಠಾರದಲ್ಲಿ ಸುತ್ತಾಡುವ ಗಿರಾಕಿಗಳಿಗೆ ಅಲ್ಲೇನು ನಡೆಯುತ್ತಿದೆಯೆನ್ನುವುದೇ ಗೊತ್ತಾಗುತ್ತಿರಲಿಲ್ಲ. ಜನಗಳ ಓಡಾಟ, ಗದ್ದಲ, ಮಾತುಗಳ ಬರಭರಾಟೆಯಲ್ಲಿ ನಾರಾಯಣಿಯ ವಠಾರದಲ್ಲಿಯ ಹೆಣ್ಣು ಮಕ್ಕಳ ವ್ಯವಹಾರ ಹಳ್ಳ ಹಿಡಿದಿತ್ತು. ನಿತ್ಯದ 'ವ್ಯವಹಾರ' ನಿಂತು ಹೋಗಿತ್ತು.

ನಾರಾಯಣಿ ಸಂಜೆಯ ಸಮಯ ಸುಬ್ಬಕ್ಕನ ಹಾಸಿಗೆಯ ಬಳಿ ಕುಳಿತಿದ್ದಳು. ಸುಬ್ಬಕ್ಕ 'ಹೂಂ... ಹೂಂ...' ಅನ್ನುತ್ತ ನರಳುತ್ತಿದ್ದಳು. ಅವಳ ಗಂಟಲಿನಿಂದ ಹೊರಡುವ ಧ್ವನಿ ಸಾಯುವ ಹೆಣ್ಣಿನ ಗಂಟಲಿನಿಂದ ಹೊರಟಂತಿತ್ತು. ಸುಬ್ಬಕ್ಕ ಒಳಗಿಂದೊಳಗೆ ಕೊಳೆಯುತ್ತಿದ್ದಳು. ಒಂದು ಬಗೆಯ ದುರ್ಗಂಧ ಕೋಣೆಯಲ್ಲಿ ಆವರಿಸಿತ್ತು. ಅವಳಿಗೆ ಕಳೆದ ಮೂರು ತಿಂಗಳಿನಿಂದ ಎಚ್ಚರವೇ ಇರಲಿಲ್ಲ. ಅವಳು ಹಂತ ಹಂತವಾಗಿ ಕೊಳೆತು ನಾರುತ್ತಿದ್ದಳು. ಎರಡು ಮೂರು ದಿನಗಳಿಗೊಮ್ಮೆ ಇಬ್ಬರು ಮೂವರು ಹೆಣ್ಣುಮಕ್ಕಳು ಅವಳನ್ನು ಎತ್ತಿಕೊಂಡು ಬಚ್ಚಲು ಮನೆಗೊಯ್ದು ಚೆನ್ನಾಗಿ ತೊಳೆದು–